**1 ನೇ ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ ಹಾನಗಲ್**

ಸಿಸಿ ನಂ.**1522/2022**

ಫಿರ್ಯಾದುದಾರಃ ಅಶೋಕ ಬಸವಣ್ಣೆಪ್ಪ ಹಲಸೂರ.

ವಿರುದ್ಧ

ಆರೋಪಿಃ ಶಂಕರ ಚಂದ್ರಕಾಂತ ಕುಮಾರ

**ದಂಡ ಪ್ರಕ್ರಿಯಾ ಸಂಹಿತೆಯ ಕಲಂ 313 ರ ಅಡಿಯಲ್ಲಿ ಆರೋಪಿಯ ಹೇಳಿಕೆ**

ಪ್ರಶ್ನೆ 1: ಪಿಡಬ್ಲ್ಯೂ 1 ಅಶೋಕ ಬಸವಣ್ಣೆಪ್ಪ ಹಲಸೂರ ರವರು ತಮ್ಮ ಸಾಕ್ಷ್ಯದಲ್ಲಿ, ಆರೋಪಿಯಾದ ನೀವು ಹಾಗೂ ಅವರು ಬಹಳ ವರ್ಷಗಳಿಂದ ಪರಿಚಯಸ್ಥರು ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ?

ಉತ್ತರ:

ಪ್ರಶ್ನೆ 2: ಪ್ರಾಸಾ -1 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ದಿನಾಂಕಃ **05.01.2021** ರಂದು ನೀವು ನಿಮ್ಮ ವ್ಯಾಪಾರದ ಅಭಿವೃದ್ಧಿಯ ಬಾಬ್ತು ದೂರುದಾರನಿಂದ ಕೈಗಡ ಸಾಲವಾಗಿ ರೂ.**15,00,000/-** ಹಣವನ್ನು **6** ತಿಂಗಳ ಒಳಗಾಗಿ ಮರು ಪಾವತಿ ಮಾಡುತ್ತೇನೆ ಎಂದು ಹೇಳಿ ಪಡೆದಿರುತ್ತೀರಿ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ?

ಉತ್ತರ:

ಪ್ರಶ್ನೆ :3 ಪ್ರಾಸಾ -1 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಸದರಿ ಅವಧಿಯಲ್ಲಿ ಸದರಿ ಕೈಗಡ ಸಾಲವನ್ನು ಮರುಪಾವತಿ ಮಾಡದ ಕಾರಣ ದೂರುದಾರನು ಸದರಿ ಸಾಲದ ಹಣವನ್ನು ಮರುಪಾವತಿಸಲು ಕೇಳಿಕೊಂಡಾಗ ನೀವು ನಿಮ್ಮ ಬಾಬ್ತು ಕೋಟಕ ಮಹೇಂದ್ರ ಬ್ಯಾಂಕ ಶಾಖೆ ಬೆಂಗಳೂರಿಗೆ ಸಂಬಂಧಿಸಿದ ಚೆಕ್ ಸಂಖ್ಯೆ **001142** ನೇದ್ದನ್ನು ರೂ. **15,00,000/-** ದಿನಾಂಕಃ **25.10.2021** ಎಂದು ನಮೂದಿಸಿ ನೀವು ಸದರಿ ಚೆಕ್ಕನ್ನು ನೀಡಿದ್ದು ದೂರುದಾರ ಸದರಿ ಚೆಕ್ಕನ್ನು ತಮ್ಮ ಖಾತೆಯುಳ್ಳ ಕೆನರಾ ಬಾಂಕ್ ಬ್ರ್ಯಾಂಚ್ ಬೆಳಗಾಲಪೇಟೆ ನೇದ್ದರಲ್ಲಿ ನಗದಿಕರಣಕ್ಕಾಗಿ ಸಲ್ಲಿಸಿದಾಗ ಸದರಿ ಬ್ಯಾಂಕಿನವರು ದಿಃ **15.11.2021**

ರಂದು **Account Closed** ಎಂಬ ಹಿಂಬರಹದೊಂದಿಗೆ ಸದರಿ ಚೆಕ್ಕನ್ನು ಅಮಾನ್ಯ ಮಾಡಿ ಕಳುಹಿಸಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ?

ಉತ್ತರ:

ಪ್ರಶ್ನೆ 4: ಪ್ರಾಸಾ -1 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಸದರಿ ಚೆಕ್ ಅಮಾನ್ಯಗೊಂಡ ಬಗ್ಗೆ ನಿಮಗೆ ದೂರುದಾರ ಪರ ವಕೀಲರು ದಿಃ **14.12.2021** ರಂದು ನೊಂದಾಯಿತ ಅಂಚೆ ಮೂಲಕ ನೋಟಿಸನ್ನು ನೀಡಿದ್ದು ಸದರಿ ನೋಟಿಸು ದಿನಾಂಕಃ **16.12.2021** ರಂದು ನಿಮಗೆ ಜಾರಿಯಾಗಿದ್ದರೂ ಸಹ ನೀವು ನಿಗದಿತ ಸಮಯದಲ್ಲಿ ದೂರುದಾರನ ಹಣ ಪಾವತಿ ಮಾಡಿಲ್ಲ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ?

ಉತ್ತರ:

ಪ್ರಶ್ನೆ 5: ನಿಮಗೆ ಈ ಕೇಸಿನ ಬಗ್ಗೆ ಮತ್ತೆ ಏನಾದರೂ ಹೇಳುವುದು ಇದೆಯೇ?

ಉತ್ತರ:

ಪ್ರಶ್ನೆ 6: ನಿಮ್ಮ ಪರವಾಗಿ ಸಾಕ್ಷಿ ವಿಚಾರಣೆ ಇದೆಯೇ?

ಉತ್ತರ:

ಈ ಮೇಲ್ಕಂಡ ಹೇಳಿಕೆಯನ್ನು ನಾನೇ ಸ್ವತಃ ಆರೋಪಿಗೆ ಓದಿ ಹೇಳಿ, ಅವರು ಕೊಟ್ಟ ಉತ್ತರವನ್ನು ಯಥಾವತ್ತಾಗಿ ಬರೆದುಕೊಂಡಿದ್ದು, ಮೇಲೆ ಹೇಳಿರುವುದು ಸತ್ಯ ಮತ್ತು ಸರಿಯಾಗಿದೆಯೆಂದು ದೃಢೀಕರಿಸಿರುತ್ತೇನೆ.

ದಿನಾಂಕಃ 23.12.2025

Sd/-
**(ಶ್ರೀ.ಅಮೋಲ ಜಯಕುಮಾರ ಹಿರಿಕುಡೆ)**
C/C 1 ನೇ **ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು**
**ಮತ್ತು ಪ್ರ.ದ.ನ್ಯಾ.ದಂ., ಹಾನಗಲ್**

ಈ ಮೇಲ್ಕಂಡ ಹೇಳಿಕೆಯನ್ನು ನಾನೇ ಸ್ವತಃ ಆರೋಪಿಗೆ ಓದಿ ಹೇಳಿ, ಅವರು ಕೊಟ್ಟ ಉತ್ತರವನ್ನು ಯಥಾವತ್ತಾಗಿ ಬರೆದುಕೊಂಡಿದ್ದು, ಮೇಲೆ ಹೇಳಿರುವುದು ಸತ್ಯ ಮತ್ತು ಸರಿಯಾಗಿದೆಯೆಂದು ದೃಢೀಕರಿಸಿರುತ್ತೇನೆ.

ದಿನಾಂಕಃ 23.10.2025

(ಶ್ರೀಮತಿ ರಾಜೇಶ್ವರಿ ಜೆ ಪುರಾಣಿಕ)
C/C 1 ನೇ **ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು**
**ಮತ್ತು ಪ್ರ.ದ.ನ್ಯಾ.ದಂ., ಹಾನಗಲ್**

| | |
|---|---|
| ಫಿರ್ಯಾದುದಾರಃ | ಶ್ರೀಮತಿ ಕಲ್ಪನಾ ಕೋಂ ಆನಂದ ಕಂಚಿಗೊಲ್ಲರ 35 ವರ್ಷ, ಉಃ ಹೈನುಗಾರಿಕೆ ವ ವ್ಯಾಪಾರ, ಸಾಃ ನವನಗರ ಹಾನಗಲ್ಲ, ಹಾನಗಲ್ ತಾಲ್ಲೂಕು, ಹಾವೇರಿ ಜಿಲ್ಲೆ. |
| | ವಿರುದ್ಧ |
| ಆರೋಪಿಃ | ನಾಗರತ್ನಾ ತಂದೆ ಅರ್ಜುನ ಕೊಪ್ಪದ, 30 ವರ್ಷ, ಉಃ ಖಾಸಗಿ ನೌಕರಿ, ಸಾಃ ನವನಗರ-ಹಾನಗಲ್ಲ, ತಾಃ ಹಾನಗಲ್ಲ, ಜಿಃ ಹಾವೇರಿ. |

## ಆರೋಪಣೆ

ಶ್ರೀ ಬಿ.ವೆಂಕಟಪ್ಪ, ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳು ಹಾನಗಲ್ ಆದ ನಾನು ಆರೋಪಿಯಾದ ನಿಮ್ಮ ಮೇಲೆ ಆರೋಪಣೆ ಹೊರಿಸುವುದೆನೆಂದರೆಃ

ಆರೋಪಿ ದಿನಾಂಕ 2022 ನೇ ಇಸ್ವಿ ಜನವರಿ ತಿಂಗಳಲ್ಲಿ ಪಿರ್ಯಾದಿದಾರರನ್ನು ಭೇಟಿಯಾಗಿ ನಿನ್ನ ಗೃಹಕೃತ್ಯದ ಅಡಚಣೆ ಹಾಗೂ ಅತೀ ಜರೂರು ದೇಣಿ ತಿರಿಸುವ ಸಲುವಾಗಿ ರೂ.**3,00,000/-** ಹಣವನ್ನು ಕೈಗಡ ಸಾಲವನ್ನಾಗಿ ಪಡೆದುಕೊಂಡಿದ್ದು ಸದರಿ ಸಾಲದ ಹಣವನ್ನು **6** ತಿಂಗಳ ಒಳಗಾಗಿ ಮರುಪಾವತಿ ಮಾಡುವುದಾಗಿ ಒಪ್ಪಿ ಪಡೆದುಕೊಂಡಿದ್ದು, ನಿಗದಿತ ಸಮಯದ ತರುವಾಯ ಫಿರ್ಯಾದಿದಾರರು ತಾವು ನೀಡಿದ ಸಾಲದ ಹಣವನ್ನು ಮರುಪಾವತಿ ಮಾಡುವಂತೆ ಕೇಳಿದಾಗ ನಿನ್ನ ಖಾತೆಯಲ್ಲಿ ನಮೂದಿಸಿದಷ್ಟು ಹಣ ಜಮಾ ಇಲ್ಲ ಎಂದೂ ಗೊತ್ತಿದ್ದರೂ ಕೂಡ ಫಿರ್ಯಾದಿಗೆ ಮೋಸ ಹಾಗೂ ನಷ್ಟವನ್ನುಂಟು ಮಾಡುವ ಉದ್ದೇಶದಿಂದ, ತನ್ನ ಉಳಿತಾಯ ಖಾತೆಯಲ್ಲಿ ಹಣ ಜಮಾ ಇರುವುದಾಗಿಯೂ, ಅಲ್ಲಿಂದ ಹಣ ನಗದೀಕರಣಗೊಳಿಸಿಕೊಳ್ಳುವಂತೆಯೂ

ತಿಳಿಸಿ, ಕರ್ನಾಟಕ ಬ್ಯಾಂಕ, ಶಾಖೆ ಹಾನಗಲ್ಲ ರೂ.**3,00,000/-** ಮೌಲ್ಯದ ದಿಃ **10.11.2022** ನೇ ದಿನಾಂಕದ ಚೆಕ್ ಸಂಖ್ಯೆ **062827** ನೇದ್ದನ್ನು ಬರೆದು ಅದಕ್ಕೆ ಸಹಿ ಮಾಡಿ, ಪಿರ್ಯಾದಿ ಬ್ಯಾಂಕಿಗೆ ನೀಡಿದ್ದು ಅದನ್ನು ನಗದೀಕರಣಕ್ಕಾಗಿ ಪಿರ್ಯಾದಿ ಬ್ಯಾಂಕಿನವರು ದಿಃ **15.11.2022** ರಂದು ಕರ್ನಾಟಕ ಬ್ಯಾಂಕ, ಹಾನಗಲ್ಲ ಶಾಖೆಗೆ ಸಲ್ಲಿಸಿದಾಗ ಸದರಿ ಬ್ಯಾಂಕಿನವರು ಆರೋಪಿತನ ಖಾತೆಯಲ್ಲಿ ಚೆಕ್ಕಿನಲ್ಲಿ ನಮೂದಿಸಿದಷ್ಟು ಹಣವಿಲ್ಲ ಎಂದು ದಿಃ **15.11.2022** ರಂದು ಹಿಂಬರಹದೊಂದಿಗೆ ಪಿರ್ಯಾದಿ ಬ್ಯಾಂಕಿಗೆ ಮರಳಿಸಿದ್ದು, ಪಿರ್ಯಾದುದಾರರು ದಿಃ **21.11.2022** ರಂದು ತಮ್ಮ ವಕೀಲರ ಮೂಲಕ ಕಾನೂನು ಬದ್ದ ನೋಟಿಸ ನೀಡಿದ್ದು, ಸದರಿ ನೋಟೀಸು ದಿನಾಂಕಃ 23.11.2022 ರಂದು ಖುದ್ದಾಗಿ ನಿಮಗೆ ಜಾರಿಯಾಗಿದ್ದರೂ ಸಹ ನೀವು ಚೆಕ್ ನಲ್ಲಿ ನಮೂದಿಸಿದ ಹಣವನ್ನಾಗಲೀ ನೋಟೀಸಿಗೆ ಯಾವುದೇ